**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು</u>**

**ಓಎಸ್ ನಂ. 303/2022**

ಡಿಡಬ್ಲ್ಯೂಃ 1

**ದಿನಾಂಕಃ19.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಆರ್ ಎಲ್ ರವರಿಂದಃ</u>**

ಚತ್ರೋಜಿ ಮುನಿಯಪ್ಪರವರಿಗೆ 4 ಜನ ಮಕ್ಕಳು. ಚತ್ರೋಜಿ ಮುನಿಯಪ್ಪರವರಿಗೆ ಎಷ್ಟು ಆಸ್ತಿಗಳು ಇತ್ತು ಎಂದು ಗೊತ್ತಿಲ್ಲ. ಚತ್ರೋಜಿ ಮುನಿಯಪ್ಪರವರಿಗೆ ಯಾವ ಕಡೆಗಳಲ್ಲಿ ಆಸ್ತಿ ಇತ್ತು ಎಂದು ಗೊತ್ತಿಲ್ಲ. ಚತ್ರೋಜಿಮುನಿಯಪ್ಪರವರ ಹೆಸರಿನಲ್ಲಿ ಸುಮಾರು 7-8 ಜಮೀನುಗಳು ಇತ್ತು ಎಂದರೆ ಗೊತ್ತಿಲ್ಲ. ಆ 7-8 ಜಮೀನುಗಳು ಚತ್ರೋಜಿಮುನಿಯಪ್ಪರವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಗೊತ್ತಿಲ್ಲ. ಈ ಹಿಂದೆ ನಾನು ಒಂದು ಸಿವಿಲ್ ದಾವೆ ನಂ.116/2022 ರಂತೆ ಹಾಕಿದ್ದೆ ಎಂದರೆ ಸರಿ. ಆ ದಾವೆಯನ್ನು ವಿಭಾಗ ಮಾಡಿಕೊಳ್ಳಲು ಹಾಕಿದ್ದೆ. ಆ ದಾವೆಯಲ್ಲಿ ಚತ್ರೋಜಿಮುನಿಯಪ್ಪರವರಿಗೆ ಸೇರಿದ ಎಲ್ಲಾ ಸ್ವತ್ತುಗಳನ್ನು ಸೇರಿಸಿಲ್ಲ. ಆ ದಾವೆಯಲ್ಲಿ ಚತ್ರೋಜಿಮುನಿಯಪ್ಪರವರ ಎಲ್ಲಾ ಆಸ್ತಿಗಳನ್ನು ಯಾಕೆ ಸೇರಿಸಿಲ್ಲ ಎಂದರೆ ಗೊತ್ತಿಲ್ಲ. ಆ ದಾವೆಯಲ್ಲಿ ಚತ್ರೋಜಿ ಮುನಿಯಪ್ಪರವರ ಎಲ್ಲಾ ಆಸ್ತಿಗಳನ್ನು ಸೇರಿಸದೇ ಒಂದು ಆಸ್ತಿಗೆ ಮಾತ್ರ ಸುಳ್ಳು ಹೇಳಿ ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಗೊತ್ತಿಲ್ಲ.

ನನಗೆ ಸೇರಿದ ಜಮೀನಿನ ಸರ್ವೆ ನಂಬರ್ 20, ಅದರ ವಿಸ್ತೀರ್ಣ 4 ಎಕರೆ. ಅದರ ಚೆಕ್ಕು ಬಂದಿ ಗೊತ್ತಿರುತ್ತದೆ. ಪೂರ್ವಕ್ಕೆ ವಾದಿ ನಾರಾಯಣಪ್ಪ, ಅದರ ಸರ್ವೆ ನಂಬರ್ ಗೊತ್ತಿಲ್ಲ. ವಾದಿಯ ಜಮೀನಿನ ಚೆಕ್ಕು ಬಂದಿ ಗೊತ್ತಿಲ್ಲ. ಪಶ್ಚಿಕ್ಕೆ ಕೃಷ್ಣೋಜಿ ರಾವ್, ಉತ್ತರಕ್ಕೆ ಕಾಲುವೆ ಮತ್ತು ದಕ್ಷಿಣಕ್ಕೆ ಕೃಷ್ಣಪ್ಪ ರಾವ್. ಈಗ ಹೇಳಿದ ಚೆಕ್ಕು ಬಂದಿಯಲ್ಲಿ 4 ಎಕರೆ ಇದೆ. ಸದರಿ 4 ಎಕರೆಯಲ್ಲಿ ಮಾವಿನ ಗಿಡ ಮತ್ತು ಹುಣಸೆ ಗಿಡಗಳು ಇವೆ. ಸುಮಾರು 30 ವರ್ಷಗಳಿಂದ ಮಾವಿನ ಗಿಡಗಳು ಇವೆ. ಈ ಹಿಂದೆ ವಿಭಾಗಕ್ಕಾಗಿ ಸಲ್ಲಿಸಿದ ದಾವೆಯನ್ನು 2022 ರಲ್ಲಿ ಹಾಕಿರುತ್ತೇನೆ. ಈ ಹಿಂದೆ ಹಾಕಿದ ದಾವೆಯಲ್ಲಿ 4 ಎಕರೆ ಜಮೀನಿನಲ್ಲಿ ಮಾವಿನ ತೋಪು

ಇರುವುದಾಗಿ ಹೇಳಿ ಬರೆಸಿರುತ್ತೇನೆ. ಆ ದಾವೆಯಲ್ಲಿ ಸಲ್ಲಿಸಲಾದ ರಾಜೀ ಅರ್ಜಿಯಲ್ಲಿ ಮಾವಿನ ತೋಪು ಇರುವುದಾಗಿ ತೋರಿಸಿರುತ್ತೇನೆ. ಈ ಹಿಂದೆ ಸಲ್ಲಿಸಿದ ದಾವೆಯಲ್ಲಿ ಮತ್ತು ರಾಜೀ ಅರ್ಜಿಯಲ್ಲಿ ಮಾವಿನ ತೋಪು ಇರುವುದಾಗಿ ತೋರಿಸಿಲ್ಲ ಎಂದರೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಮಾವಿನ ತೋಪು ಇರುವುದಾಗಿ ಕಂಡು ಬಂದಿರುವುದಿಲ್ಲ ಎಂದರೆ ಸರಿ.

ನನ್ನ ಜಮೀನಿಗೆ ಉತ್ತರದ ಕಡೆ ಇದೆ ಎನ್ನಲಾದ ಕಾಲುವೆ ವಾದಿಯ ದಾವಾ ಸ್ವತ್ತಿನ ಉತ್ತರಕ್ಕೆ ಇದೆ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಕಾಲುವೆ ಇದ್ದು ಆ ಕಾಲುವೆಯ ನಂತರ ನನ್ನ ಜಮೀನು ಇದೆ ಎಂದರೆ ಗೊತ್ತಿಲ್ಲ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.** )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/–
(ಶ್ರೀಮತಿ ರೋಹಿಣಿ. ಡಿ)
ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು